ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಹೌದು. ಈ ಪ್ರಸ್ತಾವನೆಯು ಈ ಸಾಲಿನ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಆ) ಪ್ರಸ್ತಾವಿತ ಕಾಮಗಾರಿಯಡಿ ಸೇತುವೆ ಸಹಿತ ಕಿಂಡಿ ಅಣೆಕಟ್ಟು ನಿರ್ಮಾಣದಲ್ಲಿ 48 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದರೊಂದಿಗೆ ಸಂಪರ್ಕವನ್ನು ಸಹ ಕಲ್ಪಿಸಬಹುದಾಗಿದೆ.

ವೃತ್ತಿ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಚ್ಚಳವಾಗಿರುವ ಫೀ ಮತ್ತು ಭೋದನಾ ಶುಲ್ಕದ ಪುನರ್ ಪರಿಶೀಲನೆ

4495 (5316) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೃತ್ತಿ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಹೆಚ್ಚಳವಾಗಿ ನಿಗದಿಯಾಗಿರುವ ಫೀ ಹಾಗೂ ಇತರೆ ಬೋಧನಾ ಶುಲ್ಕಗಳು ಶ್ರೀ ಸಾಮಾನ್ಯನಿಗೆ ತುಂಬಾ ಹೊರೆಯಾಗಿದ್ದು, ಇದನ್ನು ಪುನರ್ ಪರಿಶೀಲಿಸಬೇಕೆಂದು ಒತ್ತಾಯಿಸಿ ಪಾಲಕರು ಪೋಷಕರು ಮತ್ತು ವಿಧ್ಯಾರ್ಥಿ ಸಮುದಾಯ ಸರಕಾರಕ್ಕೆ ಏನಾದರೂ ಮನವಿ ಮಾಡಿದ್ದಾರೆಯೇ;

ಆ) ಮನವಿ ಮಾಡಿದ್ದಲ್ಲಿ ಈ ಬಗೆಗೆ ಪರಿಶೀಲಿಸಲಾಗುವುದೇ?

ಶ್ರೀ ಡಾ.ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಹೌದು.

ಆ) ವೃತ್ತಿ ಶಿಕ್ಷಣ ಪ್ರವೇಶ ನೀತಿಗೆ ಸಂಬಂಧಿಸಿದಂತೆ ಕರ್ನಾಟಕದ ಉಚ್ಚ ನ್ಯಾಯಾಲಯವು ತನ್ನ ಮಧ್ಯಂತರ ಆದೇಶದಲ್ಲಿ ಪ್ರಸ್ತುತ ವರ್ಷಕ್ಕೆ ಸೀಮಿತವಾಗಿರುವಂತೆ ಸೀಟುಗಳ ವರ್ಗೀಕರಣ ಹಾಗೂ ವಿವಿಧ ಕೋರ್ಸುಗಳಿಗೆ ಶುಲ್ಕವನ್ನು ನಿಗದಿಪಡಿಸಿದೆ ಹಗೂ ಶುಲ್ಕ ನಿಯಂತ್ರಣ ಸಮಿತಿಯು ಶುಲ್ಕ ಎಷ್ಟು ನಿಗದಿಪಡಿಸಬೇಕೆಂಬ ಬಗ್ಗೆ ಸಂಬಂಧಪಟ್ಟ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ 15 ದಿನಗಳೊಳಗಾಗಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದು, ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ 45 ದಿನಗಳ ಒಳಗಾಗಿ ಶುಲ್ಕಗಳ ಬಗ್ಗೆ ಸ್ಪಷ್ಟ ನಿಲುವನ್ನು ನ್ಯಾಯಾಲಯಕ್ಕೆ ತೀಳಿಸುವಂತೆ ಆದೇಶಿಸಿದೆ. ನ್ಯಾಯಾಲಯದ ಆದೇಶದ ಅನ್ವಯ ಪ್ರಸ್ತಾವನೆ ನೀಡುವಂತೆ ಎಲ್ಲಾ ವೃತ್ತಿಪರ ಕಾಲೇಜುಗಳಿಗೆ ಈಗಾಗಲೇ ಸುಚಿಸಲಾಗಿದೆ. ಈ ಮಧ್ಯೆ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಮೇಲೆ ಕೆಲವೊಂದು ಶಿಕ್ಷಣ ಸಂಸ್ಥೆಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಪ್ರಕರಣ ದಾಖಲಾಗಿದ್ದು ವಿಚಾರಣೆ ನಡೆಯುತ್ತಿದ್ದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಕಿರಿಯ ಕಾಲೇಜುಗಳಿಗೆ ಅನುದಾನ

4491 (5287) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪದವಿ ಪೂರ್ವ ತರಗತಿಗಳನ್ನು ನಡೆಸುತ್ತಿರುವ ಎಷ್ಟು ಕಿರಿಯ ಕಾಲೇಜುಗಳಿಗೆ ಅನುದಾನ ನೀಡಲಾಗುತ್ತಿದೆ; ಈ ಅನುದಾನದ ಮೊತ್ತವೆಷ್ಟು; (ಜಿಲ್ಲಾವಾರು, ಶಿವಮೊಗ್ಗ ಜಿಲ್ಲೆಯ ಶಿಕ್ಷಣ ಸಂಸ್ಥೆವಾರು ವಿವರ ನೀಡುವುದು)

ಆ) ಅನುದಾನ ನೀಡಲು ದಾಖಲೆ ಮಾದರಿ ಸೂತ್ರ ಏನಾದರೂ ರೂಪಿಸಿದೆಯೆ ಮತ್ತು ಈ ಮಾದರಿ ಸೂತ್ರವನ್ನು ಪಾಲಿಸುತ್ತಿರುವ ಸಂಸ್ಥೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಮಾದರಿ ಸೂತ್ರ ಪಾಲಿಸದ ಸಂಸ್ಥೆಗಳಿಗೆ ಅನುದಾನ ನಿಡುತ್ತಿರುವ ಅಗತ್ಯತೆ ಏನು?

ಈ) ಮಾದರಿ ಸೂತ್ರಗಳನ್ನು ಪಾಲಿಸುವ ಬಗ್ಗೆ ವಾರ್ಷಿಕ ತಪಾಸಣೆ ನಡೆಸಲಾಗುತ್ತಿದೆಯೇ; ಕೊನೆಯ ತಪಾಸಣೆ ನಡೆಸಿದ್ದು ಯಾವಾ (ಜಿಲ್ಲಾವಾರು ವಿವರ ನೀಡುವುದು)

ಉ) 2002–03 ಸಾಲಿನ ಭಾರತದ ಲೆಕ್ಕ ಪರಿಶೋಧಕರು ಮತ್ತು ನಿಯಂತ್ರಕರ ವರದಿಯಲ್ಲಿ ಮಾದರಿ ಸೂತ್ರ ಬದಿಗೊತ್ತಿ ಸುಮಾರು 20.5. ಕೋಟಿ ಬಿಡುಗಡೆಗೊಳಿಸಲಾಗಿದೆ ಎಂಬ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ ಅನುದಾನ ಬಿಡುಗಡೆಗೊಳಿಸದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆಯೇ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಪ್ರೋ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2002–03ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಒಟ್ಟು ಮೊತ್ತ ರೂ. 10913.66 (ಜಿಲ್ಲಾವಾರು ಶಿವಮೊಗ್ಗ ಜಿಲ್ಲೆಯ ಶಿಕ್ಷಣ ಸಂಸ್ಥೆವಾರು ವಿವರಗಳ ಪಟ್ಟಿ ಲಗತ್ತಿಸಿದೆ.

ಅನುಬಂಧ–1–2

ಆ) ಅನುದಾನ ಸಂಹಿತೆಯಲ್ಲಿರುವ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿದೆ. ಅದರಂತೆ ಪಾಲಿಸುತ್ತಿರುವ ಸಂಸ್ಥೆಗಳ ಸಂಖ್ಯೆ 526 ಜಿಲ್ಲಾವಾರು ಮಹಿತಿ ಅನುಬಂಧ– 1 ಮತ್ತು 2 ರಲ್ಲಿ ಒದಗಿಸಿದೆ.

ಇ) ಅನುದಾನ ಸಂಹಿತೆಯ ನಿಯಮಗಳನ್ನು ಪಾಲಿಸುವ ಸಂಸ್ಥೆಗಳಿಗೆ ಷರತ್ತುಗಳನ್ನು ವಿಧಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಅನುಮೋದನೆಗೊಂಡಿರುವ ಉಪನ್ಯಾಸಕರನ್ನು ಗಮನದಲ್ಲಿಟ್ಟುಕೊಂಡು ಅನುದಾನ ಬಿಡುಗಡೆ ಮಾಡಲಾಗಿದೆ.

ಈ) ಹೌದು.

ಜಿಲ್ಲಾವರು ವಿವರಗಳನ್ನು ಅನುಬಂಧ– 3ರಲ್ಲಿ ಒದಗಿಸಿದೆ.

ಉ) ಬಂದಿದೆ. ಅನುದಾನ ಸಂಹಿತೆಯ ನಿಯಮಗಳನ್ನು ಪಾಲಿಸದೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ಆದೇಶ ಸಂಖ್ಯೆ ಇಡಿ 01 ಟಿಪಿಯು 02 ದಿ. 11.02.2002 ರಂತೆ ಕಾಲಾವಕಾಶ ನೀಡಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇದ್ದರೆ ಹಾಗೂ ನಿಗದಿತ ವಿದ್ಯಾರ್ಥಿಗಳನ್ನುನಿಯಮಾನುಸಾರ ಹೆಚ್ಚಿಸಿಕೊಳ್ಳದಿದ್ದಲ್ಲಿ ಕಾಲೇಜಿನ ಮಂಜೂರಾತಿ ಆದೇಶವನ್ನು ರದ್ದುಪಡಿಸಲಾಗುವುದು ಆದ್ದರಿಂದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕ್ರ ಸಂ.	ಕೋಡ	ಕಾಲೇಜಿನ ಹೆಸರು	2002–03		2003–04	
			ಯೋಜನೇತರ	ಯೋಜನೆ	ಯೋಜನೇತರ	ಯೋಜನೆ
1	2	3	4	5	6	7
1.	ಟಿಟಿ–009	ಕಸ್ತೂರಿಭಾ ಪಪೂಕಾ ಶಿವಮೊಗ್ಗ	4293932	0	1547439	0
2.	ಟಿಟಿ–008	ರಾಷ್ಟ್ರೀಯ ಸಪೂಕಾ ಶಿವಮೊಗ್ಗ	4068930	0	1416321	0
3.	ಟಿಟಿ–044	ಡಿವಿಎಸ್. ಸಪೂಕಾ ಶಿವಮೊಗ್ಗ	1659386	49963	546997	24457
4.	ಟಿಟಿ–011	ಡಿವಿಎಸ್ ಸಪೂಕಾ ಶಿವಮೊಗ್ಗ	1075413	107141	400062	189600
5.	ಟಿಟಿ–045	ಜೆಸಿಎಸ್ ಸಪೂಕಾ ಶಿವಮೊಗ್ಗ	1649327	0	539269	0
6.	ಟಿಟಿ–052	ಟಿವಿಎಸ್ ಸ್ವಪಪೂಕಾ ಶಿವಮೊಗ್ಗ	7888790	115795	2611985	39421
7.	ಟಿಟಿ–49	ವೀಣಾಶಾರದ ಸಪೂಕಾ ಶಿವಮೊಗ್ಗ	1574050	07968	549900	5279
8.	ಟಿಟಿ–47	ಶ್ರೀ ಮಾರುತಿ ಪಪೂಕಾ ಮೊಳಲೂರು	1553603	0	576136	0
9.	ಟಿಟಿ–42	ಶ್ರೀ ಕೃಷ್ಣ ಪ್ರಪೂಕಾ ಭದ್ರಾವತಿ	1577095	0	528218	0

1	2	3	4	5	6	7
10.	ಟಿಟಿ–37	ರಾಷ್ಟ್ರೀಯ ಸಪೂಕಾ ಬಿಆರ್	1133688	53091	389250	20820
11.	ಟಿಟಿ–33	ನಾಳಂಡ ಸಪೂಕಾ ತಾಳಗುಪ್ಪ	1392333	0	495871	0
12.	ಟಿಟಿ–17	ವಿವಿವಿವಿ ಪಪೂಕಾ ಜೋಗಪಾಲಸಿ	3303454	0	1114792	0
13.	ಟಿಟಿ–23	ರಾಷ್ಟ್ರೀಯ ಪಪೂಕಾ ಕೋಣಂದೂರು	1852115	0	567646	0
14.	ಟಿಟಿ–53	ಸಿದ್ದವೃಷಬೇಂದ್ರ ಪಪೂಕಾ ಜಡೆ	930826	189914	243274	63625
		ಒಟ್ಟು	33953947	673972	11527160	261211

ಕ್ರ.ಸಂ.		ಕಾಲೇಜಿನ ಹೆಸರು	ಕೊನೆಯ ತಪಾಸಣಾ ದಿನಾಂಕ
1.	ಟಿಟಿ–009	ಕಸ್ತೂರಿಭಾ ಪಪೂಕಾ ಶಿವಮೊಗ್ಗ	27–1–2003
2.	ಟಿಟಿ–008	ರಾಷ್ಟ್ರೀಯ ಸಪೂಕಾ ಶಿವಮೊಗ್ಗ	28–8–1999
3.	ಟಿಟಿ–044	ಬಸವೇಶ್ವರ ಸಪೂಕಾ ಶಿವಮೊಗ್ಗ	26–4–03
4.	ಟಿಟಿ–011	ಡಿವಿಎಸ್ ಸಪೂಕಾ ಶಿವಮೊಗ್ಗ	2–9–1999
5.	ಟಿಟಿ–045	ಜೆಸಿಎಸ್ ಸಪೂಕಾ ಶಿವಮೊಗ್ಗ	4–12–01
6.	ಟಿಟಿ–052	ಟಿವಿಎಸ್ ಸ್ವಪಪೂಕಾ ಶಿವಮೊಗ್ಗ	7–11–02
7.	ಟಿಟಿ–49	ವೀಣಾಶಾರದ ಸಪೂಕಾ ಶಿವಮೊಗ್ಗ	2–2–2003
8.	ಟಿಟಿ–47	ಶ್ರೀ ಮಾರುತಿ ಪಪೂಕಾ ಮೊಳಲೂರು	20–6–2002
9.	ಟಿಟಿ–12	ಶ್ರೀ ಕೃಷ್ಣ ಪ್ರಪೂಕಾ ಭದ್ರಾವತಿ	30–1–2002
10.	ಟಿಟಿ–37	ರಾಷ್ಟ್ರೀಯ ಸಪೂಕಾ ಬಿಆರ್ ಪ್ರೊಜೆಕ್ಟ್	17–1–2002
11.	ಟಿಟಿ–33	ನಾಳಂಡ ಸಪೂಕಾ ತಾಳಗುಪ್ಪ	17–7–2002
12.	ಟಿಟಿ–17	ವಿವಿವಿವಿ ಪಪೂಕಾ ಜೋಗಪಾಲಸಿ	27–11–2001
13.	ಟಿಟಿ–23	ರಾಷ್ಟ್ರೀಯ ಪಪೂಕಾ ಕೋಣಂದೂರು	22–5–2002
14.	ಟಿಟಿ–53	ಸಿದ್ದವೃಷಬೇಂದ್ರ ಪಪೂಕಾ ಜಡೆ	30–4–2002

ಅನುಬಂಧ

ಲಕ್ಷ ರೂ. ಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲಾ ಉಪ ನಿರ್ದೇಶಕರು	2002–03		2003–04	
		ಯೋಜನೆ	ಯೋಜನೇತರ	ಯೋಜನೆ	ಯೋಜನೇತರ
	ಹಂಚಿಕೆ ಮೊತ್ತ	540.0	10654.57	240.00	10401.87
1	2	3	4	5	6
1.	ಬೆಂಗಳೂರು ಉತ್ತರ	8.81	686.40	3.69	417.80
2.	ಬೆಂಗಳೂರು ದಕ್ಷಿಣ	27.33	522.11	11.40	355.81

1	2	3	4	5	6
3.	ಬೆಂಗಳೂರು (ಗ್ರಾಮಾಂತರ	4.80	196.00	2.82	124.22
4	ಹಾವೇರಿ	16.15	217.37	6.74	394.25
5.	ಚಿತ್ರದುರ್ಗ	26.53	450.23	11.06	335.00
6.	ದಾವಣಗೆರೆ	1.17	445.50	0.50	294.85
7.	ಮಂಡ್ಯ	5.73	143.60	2.45	106.70
8.	ಹಾಸನ	21.82	319.41	10.34	237.21
9.	ಕೊಡಗು	12.82	140.40	5.34	91.95
10.	ಉತ್ತರ ಕನ್ನಡ	11.06	275.05	4.60	322.00
11.	ಬೀದರ್	30.95	49.36	13.22	374.00
12.	ತುಮಕೂರು	67.27	908.63	26.25	614.58
13.	ಬೆಳಗಾಂ	67.81	882.05	35.00	566.00
14.	ರಾಯಚೂರು	3.94	81.65	1.65	110.53
15.	ಕೊಪ್ಪಳ	5.27	74.88	2.20	57.99
16.	ದಕ್ಷಿಣ ಕನ್ನಡ	26.59	356.35	11.08	242.00
17.	ಉಡುಪಿ	11.05	276.53	4.67	226.46
18.	ಶಿವಮೊಗ್ಗ	7.36	371.00	3.07	242.00
19.	ಚಿಕ್ಕಮಗಳೂರು	15.12	129.80	6.50	75.19
20.	ಗುಲ್ಬರ್ಗಾ	19.72	695.44	8.22	276.00
21.	ಬಳ್ಳಾರಿ	3.16	143.86	1.32	98.00
22.	ಮೈಸೂರು	2.88	273.90	1.22	211.50
23.	ಚಾಮರಾಜನಗರ	—	39.46	—	22.00
24.	ಬಿಜಾಪುರ	28.65	938.42	11.95	590.00
25.	ಬಾಗಲಕೋಟೆ	16.73	365.02	7.00	246.00
26.	ಧಾರವಾಡ	11.73	460.50	4.90	316.22
27.	ಗದಗ	18.83	405.36	7.85	286.82
28.	ಕೋಲಾರ	6.600	140.50	2.27	92.00
	ಒಟ್ಟು	479.88	10433.78	207.91	7329.06

ಅನುಬಂಧ

ಜಿಲ್ಲಾವಾರು ಕೊನೆಯ ತಪಾಸಣೆ ನಡೆಸಿದ ದಿನಾಂಕಗಳ ವಿವರಗಳು

ಪ್ರಶ್ನೆ ಸಂಖ್ಯೆ 5287

ಕ್ರ.ಸಂ.	ಜಿಲ್ಲೆ	ತಪಾಸಣೆ ನಡೆಸಿದ ಕೊನೆಯ ದಿನಾಂಕ
1.	ಬೆಂಗಳೂರು ದಕ್ಷಿಣ	21–01–2003
2.	ಬೆಂಗಳೂರು ಉತ್ತರ	30–03–2003
3.	ಬೆಂಗಳೂರು (ಗ್ರಾಮಾಂತರ	18–07–2003
4	ಹಾವೇರಿ	–––
5.	ಚಿತ್ರದುರ್ಗ	21–01–2003
6.	ದಾವಣಗೆರೆ	31–01–2002
7.	ಮಂಡ್ಯ	24–03–2003
8.	ಹಾಸನ	24–03–2003
9.	ಕೊಡಗು	30–07–2003
10.	ಕಾರವಾರ	–––
11.	ಬೀದರ್	07–03–2003
12.	ತುಮಕೂರು	30–03–2003
13.	ಬೆಳಗಾಂ	–––
14.	ರಾಯಚೂರು	–––
15.	ಕೊಪ್ಪಳ	31–03–2003
16.	ದಕ್ಷಿಣ ಕನ್ನಡ	28–02–2003
17.	ಉಡುಪಿ	–––
18.	ಶಿವಮೊಗ್ಗ	26–04–2003
19.	ಚಿಕ್ಕಮಗಳೂರು	31–03–2003
20.	ಗುಲ್ಬರ್ಗಾ	31–03–2003
21.	ಬಳ್ಳಾರಿ	–––
22.	ಮೈಸೂರು	31–03–2003
23.	ಚಾಮರಾಜನಗರ	–––
24.	ಬಿಜಾಪುರ	28–02–2003
25.	ಬಾಗಲಕೋಟೆ	04–03–2003
26.	ಧಾರವಾಡ	–––
27.	ಗದಗ	27–01–2003
28.	ಕೋಲಾರ	–––